# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀರಾಮೇಶ್ವರ ಏತ ನೀರಾವರಿ ಯೋಜನೆಗೆ
ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

++ ++ ++

*ಓದಲಾಗಿದೆ :-*

ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಜಸಅ/ಯೋ.ತ/ತಾಸ-4/ಸಇ-2/ಅಂದಾಜು/2001 ದಿನಾಂಕ:04-08-2003.

*ಪ್ರಸ್ತಾವನೆ :-*

ಓದಲಾದ ಪತ್ರದಲ್ಲಿ ಶ್ರೀರಾಮೇಶ್ವರ ಏತ ನೀರಾವರಿ ಯೋಜನೆಯ ವಿವರವಾದ ಯೋಜನಾವರದಿಯನ್ನು ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರು ರೂ.218.42 ಕೋಟಿಗಳಿಗೆ ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಯೋಜನೆಗೆ 2.20 ಟಿ.ಎಂ.ಸಿ., ನೀರನ್ನು ಗೋಕಾಕ್ ತಾಲ್ಲೂಕಿನ ಧವಳೇಶ್ವರ ಸಮೀಪದಲ್ಲಿ ಘಟಪ್ರಭಾ ನದಿಯಿಂದ ನೀರನೆತ್ತಿ ಬಳಸಲು ಉದ್ದೇಶಿಸಲಾಗಿದೆ. ಕೇಂದ್ರ ಸರ್ಕಾರದ ಕೇಂದ್ರ ಜಲ ಆಯೋಗಕ್ಕೆ ದಿನಾಂಕ:15-01-2002ರಂದು ಸಲ್ಲಿಸಲಾಗಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್‌ನಲ್ಲಿ ಸದರಿ ಯೋಜನೆಗೆ 2.20 ಟಿ.ಎಂ.ಸಿ., ನೀರನ್ನು ಹಂಚಿಕೆ ಮಾಡಲಾಗಿರುತ್ತದೆ. ರಾಮದುರ್ಗ ಮತ್ತು ಗೋಕಾಕ್ ತಾಲ್ಲೂಕಿನ ಕೆಲವು ಜಮೀನುಗಳು ತೀವ್ರ ನೀರಿನ ಕೊರತೆಯನ್ನು ಅನುಭವಿಸುತ್ತಿದ್ದು, ಇದನ್ನು ನೀಗಿಸಲು 2 ಹಂತಗಳುಳ್ಳ ಸದರಿ ಏತ ನೀರಾವರಿ ಯೋಜನೆಯಿಂದ ಗೋಕಾಕ್ ತಾಲ್ಲೂಕಿನ ಸುಮಾರು 7,000 ಹೆಕ್ಟೇರ್ ಏಕರೆ ಭೂ ಪ್ರದೇಶಕ್ಕೆ ಮತ್ತು ರಾಮದುರ್ಗ ತಾಲ್ಲೂಕಿನ 6,800 ಹೆಕ್ಟೇರ್ ಭೂ ಪ್ರದೇಶಕ್ಕೆ ನೀರನ್ನು ಒದಗಿಸಲು ಉದ್ದೇಶಿಸಿದೆ. ರೂ.218.42 ಕೋಟಿಗಳ ಅಂದಾಜಿನಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಪ್ರಧಾನ ಇಂಜಿನಿಯರ್‌ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರ ಮಟ್ಟದಲ್ಲಿ ಪರಿಶೀಲಿಸಿದ್ದು, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಜಸಂಇ 14 ಎನ್‌ಐಎನ್ 2001, ಬೆಂಗಳೂರು, ದಿನಾಂಕ:23-08-03.

ಶ್ರೀರಾಮೇಶ್ವರ ಏತ ನೀರಾವರಿ ಯೋಜನೆಯ ರೂ.218.42 ಕೋಟಿಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

........2..

2. ಈ ಯೋಜನೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕೈಗೆತ್ತಿಕೊಳ್ಳಲು ಹಸ್ತಾಂತರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

23/8

(ಎಸ್.ಶ್ರೀಧರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ವಿ.ಬ್ಯಾ.ಯೋ).

ಗೆ -

1) ಮಹಾಲೇಖಪಾಲರು (ಲೆಕ್ಕ ಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4) ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5) ಮುಖ್ಯ ಇಂಜಿನಿಯರ್, ಕೆ.ಎನ್.ಎನ್.ಎಲ್., ನೀರಾವರಿ (ಉತ್ತರ), ಬೆಳಗಾಂ.
6) ಸರ್ಕಾರದ ಉಪ ಕಾರ್ಯದರ್ಶಿಗಳು, ಕ್ಯಾಬಿನೆಟ್ ವ್ಯವಹಾರಗಳು, ವಿಧಾನಸೌಧ, ಬೆಂಗಳೂರು.
7) ವಿಶೇಷ ಕರ್ತವ್ಯಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ಬೆಂಗಳೂರು.
8) ಹೆಚ್ಚಿನ ಪ್ರತಿ/ಬಿಡಿ ಪ್ರತಿ.

* * * * *